ವಿಷಯ :– ಬೇಲೂರು ತಾಲ್ಲೂಕಿನಲ್ಲಿ ಗಂಧದ ಮರ ಕಳ್ಳ ಸಾಗಾಣಿಕೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 460 (666)

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು) :– ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೇಲೂರು ತಾಲ್ಲೂಕಿನ ಸರ್ಕಾರಿ ಜಾಗದಲ್ಲಿರುವ ಗಂಧದ ಮರ ಮತ್ತಿ ಮರಗಳು ಮರಗಳ್ಳರಿಂದ ಅವ್ಯಹತವಾಗಿ ಕಳ್ಳ ಸಾಗಾಣಿಕೆ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರಿ ರಸ್ತೆ ಬದಿಗಳಲ್ಲಿರುವ ಸಾಲು ಮರಗಳನ್ನು ಕಳ್ಳರು ಕಡಿದು ತೆಗೆದುಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಇ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :–

ಅ) ಬಂದಿದೆ. ಶ್ರೀಗಂಧದ ಮತ್ತಿತರ ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆಯಾಗದಂತೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. 1990–91 ರಲ್ಲಿ 3 ಶ್ರೀಗಂಧದ ಕಳ್ಳ ಸಾಗಾಣಿಕೆಯ ಪ್ರಕರಣವನ್ನು ಪತ್ತೆ ಮಾಡಿ ಈ ಪ್ರಕರಣಗಳಲ್ಲಿ ಬಳಸಲಾದ 2 ಕಾರು ಮತ್ತು 1 ಜೀಪನ್ನು ಮಾಲು ಸಹಿತ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗಿದೆ.

ಆ) ರಸ್ತೆ ಬದಿಯ ಮರಗಳು ಇದುವರೆಗೂ ಲೋಕೋಪಯೋಗಿ ಇಲಾಖೆಯವರ ವಶದಲ್ಲಿದ್ದು ಇನ್ನೂ ಅರಣ್ಯ ಇಲಾಖೆಯ ವಶಕ್ಕೆ ಕೊಟ್ಟಿರುವುದಿಲ್ಲ. ಆದರೂ ರಸ್ತೆ ಬದಿಯ ಮರಗಳನ್ನು ಅಕ್ರಮವಾಗಿ ಕಡಿಯುವ ಪ್ರಕರಣಗಳನ್ನು ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ ಮತ್ತು ಮರಗಳ ರವಾನೆ ನಿಯಮಾವಳಿಗಳಿನ್ವಯ ಹಿಡಿಯಲಾಗುತ್ತಿದೆ.

ವಿಷಯ :– ಮಾಗಡಿ ತಾಲ್ಲೋಕು ಸಾವನದುರ್ಗವನ್ನು ಜಿಂಕೆಯ ಅಭಯಾರಣ್ಯವನ್ನಾಗಿ ಮಾಡುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 461 (655)

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) :– ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಧಯವಿಟ್ಟು ಉತ್ತರಿಸುವರೆ ?

ಅ) ಮಾಗಡಿ ತಾಲ್ಲೂಕು ಸಾವನದುರ್ಗ ಅರಣ್ಯವನ್ನು ಜಿಂಕೆಯ ಅಭಯಾರಣ್ಯವಾಗಿ ಪರಿವರ್ತಿಸಲಾಗುವುದೇ ?

ಆ) ಹಾಗಿದ್ದಲ್ಲಿ, ಸರಕಾರವು ಈ ಬಗ್ಗೆ ಶೀಘ್ರದಲ್ಲಿ ಕ್ರಮ ಕೈಗೊಳ್ಳುವುದೇ ?

ಶ್ರೀ ಇ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :–

ಅ) ಸಾವನದುರ್ಗ ಅರಣ್ಯವನ್ನು ಜಿಂಕೆಯ ಅಭಯಾರಣ್ಯವಾಗಿ ಪರಿವರ್ತಿಸಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :– ಹುಬ್ಬಳ್ಳಿಯಲ್ಲಿರುವ ಮಹದೇವ ಜವಳಿ ಗಿರಣಿಯ ಲಾಭ ನಷ್ಟದ ಬಗ್ಗೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 462 (670)

ಶ್ರೀ ಪಿ. ಸಿ. ಸಿದ್ಧನಗೌಡರ್ (ಕಲಘಟಗಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿಯಲ್ಲಿರುವ ಮಹದೇವ ಜವಳಿ ಗಿರಣಿಯ ಆಡಳಿತವನ್ನು ಸರ್ಕಾರ ವಹಿಸಿಕೊಂಡಿದ್ದು ಯಾವಾಗ ?

ಆ) ಸರ್ಕಾರ ವಹಿಸಿಕೊಂಡ ನಂತರ ಇದುವರೆವಿಗೂ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಲಾಭ ಅಥವಾ ನಷ್ಟವನ್ನು ಅನುಭವಿಸಿದೆ (ಕಳೆದ ಮೂರು ವರ್ಷಗಳ ಪ್ರತಿಯೊಂದು ವರ್ಷದ ಬಗ್ಗೆ ಪ್ರತ್ಯೇಕ ಮಾಹಿತಿ ನೀಡುವುದು).

ಇ) ಈ ಗಿರಣಿಯನ್ನು ಸರ್ಕಾರ ವಹಿಸಿಕೊಂಡ ನಂತರ ಹೂಡಿದ ಬಂಡವಾಳವೆಷ್ಟು ?

ಈ) ಈ ಗಿರಣಿಯು ನಷ್ಟದ ಅಂಚಿನಲ್ಲಿ ನಡೆಯುತ್ತಿರುವುದರಿಂದ ಈ ಗಿರಣಿಯನ್ನು ಸಂಜಯ ಸಹಕಾರಿ ನೂಲಿನ ಗಿರಣಿ ಪುಬ್ಬಳ್ಳಿ ಇವರಿಗೆ ವಹಿಸಿಕೊಡುವ ವಿಚಾರ ಸರ್ಕಾರದ ಮುಂದಿದೆಯೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) 4–4–1979.

ಆ) ಲಾಭವನ್ನು ಗಳಿಸದೇ ಕಳೆದ ಮೂರು ವರ್ಷಗಳಲ್ಲಿ ಈ ಕೆಳಗಿನಂತೆ ಗಿರಣಿಯು ನಷ್ಟ ಅನುಭವಿಸಿದೆ.

1987–88 — 65.32 ಲಕ್ಷ ರೂ.
1988–89 — 50.38 ,,
1989–90 — 22.04 ,,

ಇ) ಬಂಡವಾಳ ರೂಪದಲ್ಲಿ ನೀಡಿರುವುದಿಲ್ಲ. ಆದರೆ 165 ಲಕ್ಷ ರೂ. ಸಾಲದ ರೂಪದಲ್ಲಿ ಸರ್ಕಾರ ಗಿರಣಿಗೆ ನೀಡಿರುತ್ತದೆ.

ಈ) ಇಲ್ಲ.

ವಿಷಯ :– ಕೇಂದ್ರ ಸರ್ಕಾರದ ಮಂಜೂರಾತಿ ಸಿಕ್ಕಬೇಕಾದ ರಾಜ್ಯದ ಕಿರು ಜಲ ವಿದ್ಯುತ್ ಯೋಜನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 463 (671) :–

ಶ್ರೀ ಪಿ. ಸಿ. ಸಿದ್ದನಗೌದರ್ (ಕಲಘಟಗಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಎಷ್ಟು ಕಿರು ಜಲ ವಿದ್ಯುತ್ ಯೋಜನೆಗಳು ಕೇಂದ್ರದ ಒಪ್ಪಿಗೆಗಾಗಿ ಕಾದಿವೆ ?

ಆ) ಅವುಗಳ ಪೈಕಿ, ಕೇಂದ್ರ ಎಷ್ಟು ಯೋಜನೆಗಳಿಗೆ ತನ್ನ ಒಪ್ಪಿಗೆಯನ್ನು ನೀಡಿವೆ ?

ಇ) ಈಗ ಯಾವುದಾದರೂ ಜಲ ವಿದ್ಯುತ್ ಯೋಜನೆಗಳಿಗೆ ಒಪ್ಪಿಗೆ ನೀಡಿದೆಯೇ ?

ಈ) ಹಾಗಿದ್ದಲ್ಲಿ, ಈ ಜಲವಿದ್ಯುತ್ ಯೋಜನೆಗಳನ್ನು ಎಲ್ಲಿ ಪ್ರಾರಂಭಿಸಲಾಗುವುದು ?

ಉ) ಇವುಗಳು ಪ್ರತಿವರ್ಷ ಎಷ್ಟು ದಶಲಕ್ಷ ಯೂನಿಟ್‌ಗಳ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದಿದೆ.

ಊ) ಇವುಗಳನ್ನು ಕಾರ್ಯಗತಗೊಳಿಸಲು ತಗಲುವ ಅಂದಾಜು ವೆಚ್ಚವೆಷ್ಟು ?

ಋ) ಇವುಗಳ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಯಾವುದೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮಲ್ಲಾಪುರ ಜಲವಿದ್ಯುತ್ ಯೋಜನೆ ಬ್ಯಂದಾವನ ಜಲವಿದ್ಯುತ್ ಯೋಜನೆ ಮತ್ತು ಭದ್ರಾ ಬಲದಂಡೆ ಕಾಲುವೆ ಹೆಚ್ಚುವರಿ ವಿದ್ಯುತ್ ಯೋಜನೆಗಳನ್ನು ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಲಾಗಿತ್ತು. ಮತ್ತು ಈ ಯೋಜನೆಗಳಿಗೆ ಕೇಂದ್ರ ವಿದ್ಯುತ್ ಪ್ರಾಧಿಕಾರವು ತಾತ್ವಿಕ ಒಪ್ಪಿಗೆಯನ್ನು ನೀಡಿದೆ.

ಈ) ಮಲ್ಲಾಪುರ ಜಲವಿದ್ಯುತ್ ಯೋಜನೆಯನ್ನು ತುಂಗಭದ್ರಾ ಜಲಾಶಯದ ಎಡದಂಡೆ ಕಾಲುವೆಯಲ್ಲಿ ಮಲ್ಲಾಪುರದ ಪತ್ತಿರವಿರುವ ಡ್ರಾಪ್‌ನಲ್ಲಿ, ಬ್ಯಂದಾವನ ಜಲವಿದ್ಯುತ್ ಯೋಜನೆಯನ್ನು ಕೃಷ್ಣರಾಜ ಸಾಗರದ ಎಡದಂಡೆಯಲ್ಲಿರುವ ವಿಶ್ವೇಶ್ವರಯ್ಯ ಕಾಲುವೆಯ ಹೆಡ್‌ವರ್ಕ್ಸ್‌ನಲ್ಲಿ ಮತ್ತು ಭದ್ರಾ ಬಲದಂಡೆ ಕಾಲುವೆ ಜಲವಿದ್ಯುತ್ ಹೆಚ್ಚುವರಿ ಯೋಜನೆಯನ್ನು ಭದ್ರಾ ಬಲದಂಡೆ ಕಾಲುವೆಯಲ್ಲಿರುವ ವಿದ್ಯುತ್ ಆಗರದಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ.

ಉ) ಮಲ್ಲಾಪುರ ವಿದ್ಯುತ್ ಯೋಜನೆ, ಬ್ಯಂದಾವನ ಜಲ ವಿದ್ಯುತ್ ಯೋಜನೆ ಹಾಗೂ ಭದ್ರಾ ಬಲದಂಡೆ ಕಾಲುವೆ ಹೆಚ್ಚುವರಿ ವಿದ್ಯುತ್ ಯೋಜನೆಗಳಿಂದ ಕ್ರಮವಾಗಿ 51 ದಶಲಕ್ಷ ಯೂನಿಟ್ 49 ದಶಲಕ್ಷ ಯೂನಿಟ್ ಮತ್ತು 25 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದಿದೆ.

ಊ) ಮಲ್ಲಾಪುರ ಜಲವಿದ್ಯುತ್ ಯೋಜನೆ, ಬ್ಯಂದಾವನ ಜಲವಿದ್ಯುತ್ ಯೋಜನೆ ಮತ್ತು ಭದ್ರಾ ಬಲದಂಡೆ ಹೆಚ್ಚುವರಿ ಜಲವಿದ್ಯುತ್ ಯೋಜನೆಗಳನ್ನು ಕಾರ್ಯಗತಗೊಳಿಸಲು ತಗಲುವ ಅಂದಾಜು ವೆಚ್ಚ ಕ್ರಮವಾಗಿ ರೂ. 2166 ಲಕ್ಷ ರೂ. 1508 ಲಕ್ಷ ಮತ್ತು ರೂ. 690 ಲಕ್ಷ.